ಗ್ರಾಮ ಲೆಕ್ಕಿಗರ ಹುದ್ದೆಗಳು

೨೭೨. ಶ್ರೀ ಪಿ. ಸಿ. ಶಿದ್ದನಗೌಡ (ಕಂಘಟಗಿ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಜಿಲ್ಲೆಯಲ್ಲಿರುವ ಗ್ರಾಮ ಲೆಕ್ಕಿಗರ ಹುದ್ದೆಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು) ;

ಆ) ಹಾಗಿದ್ದಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

ಇ) ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ಧಾರವಾಡ ಜಿಲ್ಲೆಯ ತಾಲ್ಲೂಕುವಾರು ಗ್ರಾಮ ಲೆಕ್ಕಿಗರ ವಿವರ ಈ ಕೆಳಗಿನಂತಿದೆ.

೧	ಧಾರವಾಡ	...	೫೭
೨	ಹುಬ್ಬಳ್ಳಿ	...	೩೫
೩	ಕಲಘಟಗಿ	...	೪೦
೪	ನವಲಗುಂದ	...	೩೬
೫	ಗದಗ	...	೪೩
೬	ರೋಣ	...	೫೪
೭	ಮುಂಡರಗಿ	...	೨೫
೮	ನರಗುಂದ	...	೧೬
೯	ಹಾವೇರಿ	...	೨೯
೧೦	ಬ್ಯಾಡಗಿ	...	೧೯
೧೧	ರಾಣೆಬೆನ್ನೂರು	...	೩೦
೧೨	ಹಿರೇಕೇರೂರು	...	೩೫
೧೩	ಸವಣೂರು	...	೨೫
೧೪	ಶಿಗ್ಗಾವಿ	...	೩೮
೧೫	ಶಿರಹಟ್ಟಿ	...	೨೬
೧೬	ಹಾನಗಲ್	...	೧೪೫
೧೭	ಕುಂದಗೋಳ್	...	೩೭
	ರಜಾಮೀಸಲು	...	೩೦
		ಒಟ್ಟು	೭೨೧

ಆ) ಗ್ರಾಮ ಲೆಕ್ಕಿಗರ ಖಾಲಿ ಹುದ್ದೆಗಳು

೧	ಧಾರವಾಡ	...	೨೧
೨	ಹುಬ್ಬಳ್ಳಿ	...	೫
೩	ಕಲಘಟಗಿ	...	೧೮
೪	ನವಲಗುಂದ	...	೧೭
೫	ಗದಗ	...	೧೮
೬	ರೋಣ	...	೨೯
೭	ಮುಂಡರಗಿ	...	೯
೮	ನರಗುಂದ	...	೧
೯	ಹಾವೇರಿ	...	೫
೧೦	ಬ್ಯಾಡಗಿ	...	೬
೧೧	ರಾಣೆಬೆನ್ನೂರು	...	೧೧

೧೨	ಹಿರೇಕೇರೂರು	...	೧೩
೧೩	ಸವಣೂರಂ	...	೧೦
೧೪	ಶಿಗ್ಗಾವಿ	...	೨೧
೧೫	ಶಿರಹಟ್ಟಿ	...	೯
೧೬	ಹಾನಗಲ್	...	೧೦೮
೧೭	ಕುಂದಗೋಳ್	...	೧೯
	ರಜಾಮೀಸಲು	...	...
		ಒಟ್ಟು	೩೧೯

೫) ಜಿಲ್ಲಾವಾರು ನೇಮಕಾತಿ ಸಮಿತಿ ರಚಿಸಲು ಮಾಹಿತಿ ಸಂಗ್ರಹಿಸಲಾಗಿದೆ. ಆದರೆ ಆರ್ಥಿಕ ವಿಷಯ ಸಾಧಿಸಲು ಸಧ್ಯದ ಪರಿಸ್ಥಿತಿಯಲ್ಲಿ ಯಾವುದೇ ಖಾಲಿ ಹುದ್ದೆಗಳನ್ನು ತುಂಬಲು ಆರ್ಥಿಕ ನಿರ್ಬಂಧವಿದೆ. ಆರ್ಥಿಕ ನಿರ್ಬಂಧವನ್ನು ಸಡಿಲಿಸಿದಾಗ ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

'ಎ' ದರ್ಜೆಯ ಸ್ಟಾಂಪ್ ವೆಂಡರಂಗಳಿಗೆ ನಿಗಧಿಗೊಳಿಸಿರುವ ಸ್ಟಾಂಪ್ ಪೇಪರ್ ಮಾರಾಟದಿಂದ ಪೊತ್ತವನ್ನು ಹೆಚ್ಚಿಸುವ ಬಗ್ಗೆ

೨೭೩. ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 'ಎ' ದರ್ಜೆಯ ಸ್ಟಾಂಪ್ ವೆಂಡರುಗಳಿಗೆ ಸರ್ಕಾರದವರು ಎಷ್ಟು ಪೊತ್ತದ ಸ್ಟಾಂಪ್ ಪೇಪರುಗಳನ್ನು ಮಾರಾಟ ಮಾಡುವ ಅನುಮತಿ ನೀಡಲಾಗಿದೆಯೇ ?

ಆ) ಇವರುಗಳಿಗೆ ಕನಿಷ್ಟ ರೂ. ೫೦,೦೦೦-೦೦ ರೂಪಾಯಿಗಳ ಸ್ಟಾಂಪ್ ಪೇಪರ್ ಮಾರಾಟ ಮಾಡಲು ಸರ್ಕಾರದವರು ಅನುಮತಿ ನೀಡುವರೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ಒಂದೊಂದು ವ್ಯವಹಾರದಲ್ಲಿ ಪ್ರಸ್ತುತ ಅವರುಗಳಿಗೆ ಹತ್ತು ಸಾವಿರದವರೆ ಸಾಮಾನ್ಯ ಮುದ್ರಾಂಕ ಪತ್ರ ಮಾರಾಟ ಮಾಡಲು ಅನುಮತಿ ನೀಡಿದೆ.

ಆ) ಇಲ್ಲ.

ರಾಜ್ಯದಲ್ಲಿರುವ ಎಲ್ಲಾ ದೇವಸ್ಥಾನಗಳನ್ನು ಒಂದೇ ಕಾನೂನಿನ ಅಡಿಯಲ್ಲಿ ತರುವುದು

೨೫೫. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ ?

ಅ) ರಾಜ್ಯದಲ್ಲಿ ಸಮಗ್ರ ದೇವಸ್ಥಾನಗಳ ಅಭಿವೃದ್ಧಿಗಾಗಿ ಏಕರೂಪದ ಸಂಸ್ಥೆಗಳನ್ನು ಸ್ಥಾಪಿಸಲು ಸರ್ಕಾರಕ್ಕಿರುವ ತೊಂದರೆಯೇನು ?

ಆ) ದೇವಸ್ಥಾನಗಳ ಅಭಿವೃದ್ಧಿಗಾಗಿ ಹಾಗೂ ಧರ್ಮ ಶಾಲೆಗಳ ಅಭಿವೃದ್ಧಿಗಾಗಿ ಕಳೆದ ೩ ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆ ಮಾಡಿರುವ ಒಟ್ಟು ಮೊತ್ತ ಎಷ್ಟು ?

ಇ) ಶ್ರೀ ರೇಣುಕಾ ಎಲ್ಲಮ್ಮ ದೇವಸ್ಥಾನ ಸವದತ್ತಿ ಅಭಿವೃದ್ಧಿಗಾಗಿ ಸರ್ಕಾರದಿಂದ ಯಾವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ ಹಾಗೂ ಇಲ್ಲಿಗೆ ಬರುವ ಭಕ್ತಾದಿಗಳಿಗೆ ನೀರಿನ ಹಾಗೂ ವಾಸ ಸ್ಥಳದ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ತೊಂದರೆಗಳನ್ನು ನೀಗಿಸಲು ಸರ್ಕಾರದವರು ತಂತ್ರ ಕ್ರಮ ಕೈಗೊಳ್ಳುವರೇ?